ವಿದ್ಯುತ್ ತೀವ್ರ ಕೊರತೆಗೆ ಪರಿಹಾರ

614 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯದಲ್ಲಿ ತಲೆದೋರಿರುವ ತೀವ್ರ ವಿದ್ಯುತ್ ಬಿಕ್ಕಟನ್ನು ಬಗೆಹರಿಸಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ.*

ಆ) *ಇಂತಹ ಸನ್ನಿವೇಶದಲ್ಲಿ ಸಂಪ್ರದಾಯವಲ್ಲ ಇಂಧನ ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವರೆ ಸರ್ಕಾರದವರು ಕ್ರಮಕೈಗೊಳ್ಳುವರೆ.*

ಇ) *ಹಾಗಿದ್ದಲ್ಲಿ ಈ ಬಗ್ಗೆ ಯಾವ ಯಾವ ಮೂಲಗಳಿಂದ ಎಷ್ಟೆಷ್ಟು ವಿದ್ಯುತ್‌ನ್ನು ಉತ್ಪಾದಿಸಲಾಗುತ್ತಿದೆ?*

ಶ್ರೀ ಹೆಚ್.ಕೆ. ಪಾಟೀಲ್ (ಉಪಮುಖ್ಯ ಮಂತ್ರಿಗಳು) :

ಅ) ಶೀಘ್ರಕಾಲಿಕ ಕ್ರಮಗಳಾಗಿ ದಕ್ಷಿಣ ವಿದ್ಯುತ್ ಜಾಲದ ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ರಾಜ್ಯದ ಪಾಲನ್ನು ಪಡೆಯಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ರಾಜ್ಯದ ರಾಯಚೂರು ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರಗಳಲ್ಲಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಳಗೊಳಿಸಲಾಗಿದೆ. ಮಹಾರಾಷ್ಟ್ರದಿಂದ ಅಕ್ಟೋಬರ್ 95 ರಿಂದ ಪ್ರತಿ ತಿಂಗಳೂ ವಿದ್ಯುಚ್ಛಕ್ತಿಯನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಜನವರಿ 96ರ ಅಂತ್ಯದವರೆಗೆ ಒಟ್ಟು 140 ದಶಲಕ್ಷ ಯೂನಿಟ್ ವಿದ್ಯುತ್‌ನ್ನು ಪಡೆಯಲಾಗಿದೆ.

ಅಲ್ಪಾವಧಿಯ ಕ್ರಮವಾಗಿ ಕರ್ನಾಟಕ ಕರಾವಳಿ ಪ್ರದೇಶಗಳಲ್ಲಿ ಬಾರ್ಜ್ ಮೌಂಟೆಡ್ 'ವಿದ್ಯುತ್ ಉತ್ಪಾದನಾ ಕೇಂದ್ರಗಳ ಮೂಲಕ ಸುಮಾರು 400 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಬಿಡ್‌ಗಳನ್ನು ಆಹ್ವಾನಿಸಲಾಗಿದ್ದು ಇವು 96ರ ಅಂತ್ಯದ ವೇಳೆಗೆ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ.

ರಾಯಚೂರು ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರದಲ್ಲಿ 5 ಮತ್ತು 6ನೇ (ತಲಾ 210 ಮೆ.ವಾ. ಸಾಮರ್ಥ್ಯದ) ವಿದ್ಯುತ್ ಉತ್ಪಾದನೆ ಘಟಕಗಳನ್ನು ಸ್ಥಾಪಿಸಲು ಮತ್ತು ಬಿಡದಿ ಬಳಿ 300 ಮೆ.ವಾ. ಸಾಮರ್ಥ್ಯದ ಕಂಬೈಂಡ್ ಸೈಕಲ್ ವಿದ್ಯುತ್ ಉತ್ಪಾದನಾವನ್ನು ಖಾಸಗೀ ವಲಯದ ಸಹಭಾಗಿತ್ವದಲ್ಲಿ ಸ್ಥಾಪಿಸಲು ಕರ್ನಾಟಕ ವಿದ್ಯುತ್ ನಿಗಮಕ್ಕೆ ಅನುಮೋದನೆಯನ್ನು ನೀಡಲಾಗಿದೆ.

ಕರ್ನಾಟಕ ವಿದ್ಯುತ್ ನಿಗಮವು ಕದ್ರಾ, ಕೊಡಸಳ್ಳಿ ಮತ್ತು ಶರಾವತಿ ಟೈಲರೇಜ್ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳ ನಿರ್ಮಾಣವನ್ನು ಕೈಗೊಂಡಿದ್ದು ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ.

ದೀರ್ಘಕಾಲಿಕ ಪರಿಹಾರ ಕ್ರಮವಾಗಿ ಸರ್ಕಾರವು ರಾಜ್ಯದ ವಿವಿಧ ಸ್ಥಳಗಳಲ್ಲಿ ಖಾಸಗೀ ವಲಯದ ವಿಜನ್ನಿಗಳ ಮೂಲಕ ಒಟ್ಟು 6910 ಮೆಗಾವಾಟ್ಸ್ ಸಾಮರ್ಥ್ಯದ ವಿದ್ಯುತ್ ಉತ್ಪಾದನೆಗೆ ಅನುಮತಿಯನ್ನು ನೀಡಲಾಗಿದ್ದು ಇದರಲ್ಲಿ ಮಂಗಳೂರು ಸಮೀಪ ಮಂಗಳೂರು ವಿದ್ಯುತ್ ಕಂಪನಯು (ಕೋಜೆಂಟ್ರಿಕ್ಸ್ ಸಂಸ್ಥೆ) ಸ್ಥಾಪಿಸಲಿರುವ 1000 ಮೆ.ವಾ. ಸಾಮರ್ಥ್ಯ ವಿದ್ಯುತ್ ಉತ್ಪಾದನಾ ಕೇಂದ್ರವೂ ಸೇರಿದೆ.

ಅಲ್ಲದೇ ರಾಜ್ಯದ 20 ಸ್ಥಳಗಳಲ್ಲಿ ಒಟ್ಟು 400 ಮೆಗಾ ವಾಟ್ಸ್ ಸಾಮರ್ಥ್ಯದ ಬಹು ಇಂಧನ (ಮಲ್ಟಿಫ್ಯೂಯೆಲ್) ವಿದ್ಯುತ್ ಉತ್ಪಾದನಾ ಯೋಜನೆಗಳಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಬಿಡ್‌ಗಳನ್ನು ಆಹ್ವಾನಿಸಿ, ಸ್ವೀಕೃತವಾದ ಬಿಡ್‌ಗಳನ್ನು ತೆರೆಯಲಾಗಿದ್ದು ಈ ಬಿಡ್‌ಗಳ ತಾಂತ್ರಿಕ ಮೌಲೀಕರಣವನ್ನು ಮಾಡಲಾಗುತ್ತಿದೆ.

ಅ) ಅಸಂಪ್ರದಾಯ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡುವ ಬಗ್ಗೆ ಗಮನವನ್ನು ಹರಿಸಲಾಗುತ್ತಿದೆ.

ಇ) ಕರ್ನಾಟಕ ವಿದ್ಯುತ್ ನಿಗಮ, ಕಪ್ಪದ ಗುಡ್ಡದಲ್ಲಿ ಒಂದು ಗಾಳಿಯಂತ್ರ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಿದ್ದು ಸುಮಾರು 2 ಮೆ.ವಾ. ವಿದ್ಯುತ್ ಉತ್ಪಾದನೆಯನ್ನು ನವೆಂಬರ್ 95 ರಿಂದ ಮಾಡುತ್ತಿದೆ.

ಹೊಸದಾಗಿ ಆಸ್ಪತ್ರೆಗಳನ್ನು ಪ್ರಾರಂಭಿಸುವುದು

305 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಎಷ್ಟು ಆಸ್ಪತ್ರೆಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗುತ್ತಿರುತ್ತದೆ; (ಜಿಲ್ಲಾವಾರು ವಿವರ ನೀಡುವುದು)

ಆ) ಇನ್ನು ಅನುಮತಿ ಕೊಟ್ಟಿರದಿದ್ದಲ್ಲಿ ಹೊಸದಾಗಿ ಆಸ್ಪತ್ರೆ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಇ) ಬೀಳಗಿ ಮತ ಕ್ಷೇತ್ರದಲ್ಲಿ ಕಡಿಮೆ ಆಸ್ಪತ್ರೆಗಳಿದ್ದು ಆ ಮತ ಕ್ಷೇತ್ರಕ್ಕೆ ಹೆಚ್ಚಿನ ಆಸ್ಪತ್ರೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ಸಚಿವರು) :

ಅ) 1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ಯಾವುದೇ ಹೊಸ ಪಶು ವೈದ್ಯಕೀಯ ಆಸ್ಪತ್ರೆಗಳನ್ನು ಪ್ರಾರಂಭಿಸಲು ಅನುಮತಿ ನೀಡಿರುವುದಿಲ್ಲ.

ಆ) ಇಲ್ಲ

ಇ) 1996-97ನೇ ಸಾಲಿನಲ್ಲಿ ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

ದನಗಳ ಜಾತ್ರೆ ಕುರಿತು

609 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ 300ಕ್ಕ ಹೆಚ್ಚು ದನಗಳ ಜಾತ್ರೆ ನಡೆಯುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಜಾತ್ರೆಗಳಲ್ಲಿ ಆಯ್ಕೆಯಾದ ದನಗಳಿಗೆ ಬಹುಮಾನ ಕೊಡಲು ಹೆಚ್ಚು ಹಣವನ್ನು ಬಿಡುಗಡೆ ಮಾಡಲು ಸರ್ಕಾರವನ್ನು ಕೋರಿರುವುದು ನಿಜವಲ್ಲವೇ?

ಇ) ಹಾಗಿದ್ದಲ್ಲಿ ಹೆಚ್ಚಿನ ಮಟ್ಟದಲ್ಲಿ ಹಣವನ್ನು ಬಿಡುಗಡೆ ಮಾಡದೇ ಇರಲು ಕಾರಣಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ಸಚಿವರು) :

ಅ) ರಾಜ್ಯದಲ್ಲಿ 206 ದನಗಳ ಜಾತ್ರೆ ನಡೆಯುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ

ಇ) ಉದ್ಭವಿಸುವುದಿಲ್ಲ.